

ಎಲ್ಲವನ್ನೂ ಎದುರಿಸಿ ಸಿನಿಮಾವನ್ನು ಬಿಡುಗಡೆ ಮಾಡುತ್ತಿದ್ದೇವೆ. ಇಷ್ಟೆಲ್ಲ ಆದರೂ ನಾನು ಎರಡೂ ಸಿನಿಮಾ ಕೆಲಸಗಳನ್ನು ಮೈಗೆಳೆದುಕೊಂಡು, ಅವುಗಳಿಗೆ ಕೊಡಬೇಕಾದಷ್ಟು ಸಮಯ ಕೊಡಲು ಸಾಧ್ಯವಾಗಿಲ್ಲವೇನೋ ಎಂಬ ಗಿಲ್ಟ್ ಕೂಡ ನನಗಿದೆ' ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ ಸುನಿ.

ಸುನಿ ಸಿನಿಮಾಗಳಲ್ಲಿ ಹರಿತ ಹಾಸ್ಯವೆಂಬುದು ಒಂದು ಸಾಮಾನ್ಯ ಅಂಶ. ಈ ಸಿನಿಮಾದಲ್ಲಿ ಆ ಹರಿತ ಗುಣ ಶರಣ್ ಕೈಯಲ್ಲಿ ಸಿಕ್ಕು ಇನ್ನಷ್ಟು ಪ್ರಖರಗೊಂಡಿದೆ. ಶರಣ್ ಒಬ್ಬ ಹಾಸ್ಯನಟ ಎನ್ನುವುದನ್ನು ಸುನಿ ಬೇರೆಯೇ ರೀತಿ ಬಳಸಿಕೊಂಡಿದ್ದಾರಂತೆ.

'ಶರಣ್ ಅವರು ಹಾಸ್ಯನಟ ಎನ್ನುವುದನ್ನು ನಾನು ಬೇರೆಯೇ ರೀತಿ ಬಳಸಿಕೊಂಡಿದ್ದೇನೆ. ಅದು ಹೇಗೆ ಎನ್ನುವುದನ್ನು ತೆರೆಯ ಮೇಲೆಯೇ ನೋಡಬೇಕು. ಅವರಿಂದ ಈ ಕಥೆಗೆ ಜನರು ನಿರೀಕ್ಷಿಸಿರದ ತಿರುವು ಸಿಗುತ್ತದೆ' ಎಂದು ಕುತೂಹಲದ ಒಗ್ಗರಣೆಯನ್ನು ಹಾಕಿ ನಗುತ್ತಾರೆ ಅವರು.

ಆಶಿಕಾ ರಂಗನಾಥ್ ಈ ಸಿನಿಮಾದಲ್ಲಿ ಎನ್‌ಆರ್‌ಐ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ.

'ಜನರಿಗೆ ಈ ಸಿನಿಮಾದಲ್ಲಿ ಭರಪೂರ ಹಾಸ್ಯ, ಫ್ಯಾಮಿಲಿ ಡ್ರಾಮಾ ಮತ್ತು ಹೊಸತನ ಈ ಮೂರು ಅಂಶಗಳನ್ನು ನಿರೀಕ್ಷಿಸಬಹುದು' ಎಂದು ಚಿತ್ರಮಂದಿರಕ್ಕೆ ಜನರನ್ನು ಆಹ್ವಾನಿಸುವ ಸುನಿ, 'ಅವತಾರ ಪುರುಷ'ನ ಅವತಾರವನ್ನು ಜನರು ಗೆಲ್ಲಿಸುತ್ತಾರೆ ಎಂಬ ನಂಬಿಕೆಯಲ್ಲಿದ್ದಾರೆ. ■

# ಬಡವನ ಪ್ರಚಾರ ಶ್ರೀಮಂತಿಕೆ!



'ಡಾಲಿ' ಎಂಬ ವಿಶೇಷಣವನ್ನು ತನ್ನ ಹೆಸರಿನ ಮೊದಲು ಸೇರಿಸಿಕೊಂಡ ಮೇಲೆ ಧನಂಜಯ್ ಅವರ ಅದೃಷ್ಟ ಬದಲಾಯಿಸಿದಂತಿದೆ. ಹಲವು ದೊಡ್ಡ ಬ್ಯಾನರ್‌ನ, ದೊಡ್ಡ ನಟರ ಸಿನಿಮಾಗಳಲ್ಲಿ ನಟಿಸುವ ಅವಕಾಶ ಸಿಗುತ್ತಿರುವುದು ಒಂದೆಡೆಯಾದರೆ, ಅವರೇ ನಾಯಕನಾಗಿ ನಟಿಸುತ್ತಿರುವ ಸಾಲು ಸಾಲು ಸಿನಿಮಾಗಳೂ ಮತ್ತೊಂದೆಡೆ ಬರುತ್ತಿವೆ.

ಸ್ವತಃ ಅವರೇ ಚಿತ್ರ ನಿರ್ಮಾಣಕ್ಕೂ ಮುಂದಾಗಿದ್ದಾರೆ. ಅವರ ನಿರ್ಮಾಣದ ಚೊಚ್ಚಲ ಚಿತ್ರ 'ಬಡವ ರ್‍ಯಾಸ್ಕಲ್' ಬಿಡುಗಡೆಯ ಹಂತಕ್ಕೆ ತಲುಪಿದೆ. ಡಿ. 24ರಂದು ಬಿಡುಗಡೆಗೊಳ್ಳುತ್ತಿರುವ ಈ ಚಿತ್ರದ ಪ್ರಚಾರ ಕಾರ್ಯವೂ ವಿಶಿಷ್ಟವಾಗಿಯೇ ನಡೆಯುತ್ತಿದೆ. ತರಕಾರಿ ಅಂಗಡಿಯಲ್ಲಿ, ಪಾರ್ಲೇ–ಜಿ ಪಾಪುವಿನ ಜೊತೆಗೆ, ಕಾರು ಗ್ಯಾರೇಜ್, ಶಾಲಾ ಮಕ್ಕಳು, ಹೀಗೆ ಹಲವು ಕಡೆಗಳಲ್ಲಿ ಸ್ಲೇಟಿನ ಮೇಲೆ ಚಿತ್ರದ ಹೆಸರು ಮತ್ತು ಬಿಡುಗಡೆಯ ದಿನಾಂಕದ ಹೆಸರು ಹಾಕಿ ಪ್ರಚಾರ ಮಾಡಲಾಗುತ್ತಿದೆ. ಅಭಿಮಾನಿಗಳೇ ಸ್ವಯಂ ಪ್ರೇರಿತರಾಗಿ ಚಿತ್ರಕ್ಕೆ ಪ್ರಚಾರ ಕೊಡುತ್ತಿದ್ದಾರೆ ಎನ್ನುವುದು ಚಿತ್ರತಂಡದ ವಿವರಣೆ.

ಶಂಕರ್ ಗುರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿದ್ದಾರೆ. ಅಮೃತಾ ಅಯ್ಯಂಗಾರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ರಂಗಾಯಣ ರಘು, ತಾರಾ, ಸ್ಪರ್ಶ ರೇಖಾ, ನಾಗಭೂಷಣ್, ಪೂರ್ಣಚಂದ್ರ ಮುಂತಾದವರು ತಾರಾಗಣದಲ್ಲಿದ್ದಾರೆ. ವಾಸುಕಿ ವೈಭವ್ ಸಂಗೀತ, ಪ್ರೀತಾ ಜಯರಾಮ್ ಛಾಯಾಗ್ರಹಣ ಚಿತ್ರಕ್ಕಿದೆ. ■

# ಒಂಬತ್ತನೇ ದಿಕ್ಕು ತೋರಿಸಲು ಯೋಗಿ ರೆಡಿ

'ಹಗ್ಗದ ಕೊನೆ', 'ಆ ಕರಾಳ ರಾತ್ರಿ'ಗಳಂಥ ಸಿನಿಮಾಗಳನ್ನು ಕೊಟ್ಟಿದ್ದ ದಯಾಳ್ ಪದ್ಮನಾಭನ್ ನಿರ್ಮಿಸಿ, ನಿರ್ದೇಶಿಸುತ್ತಿರುವ ಚಿತ್ರ 'ಒಂಭತ್ತನೇ ದಿಕ್ಕು'. ಈ ಚಿತ್ರವೀಗ ಬಿಡುಗಡೆಗೆ ಸಜ್ಜಾಗಿದೆ. 2021ರ ಕೊನೆಯ ದಿನ ಅಂದರೆ ಡಿಸೆಂಬರ್ 31ರಂದು ಚಿತ್ರವನ್ನು ಪ್ರೇಕ್ಷಕರ ಮುಂದೆ ಇಡಲು ಚಿತ್ರತಂಡ ನಿರ್ಧರಿಸಿದೆ.

'ಇದುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಎಂಬ ಅಡಿಗರ ಪದ್ಯದ ಸಾಲು ಈ ಚಿತ್ರದ ಸಾರಾಂಶವನ್ನೂ ಹೇಳುತ್ತದಂತೆ. ನಾವು ಕಾಯುತ್ತಿರುವುದು ಎಲ್ಲೋ ನಮ್ಮನ್ನೂ ಕಾಯುತ್ತಿರುತ್ತದೆ. ಆದರೆ ನಾವು ಇನ್ನೆಲ್ಲೋ ಅದನ್ನು ಹುಡುಕುತ್ತಿರುತ್ತೇವೆ. ಈ ಹುಡುಕಾಟದ ಕಥೆಯೇ ಒಂಭತ್ತನೇ ದಿಕ್ಕು ಸಿನಿಮಾ ಎಂಬುದು ಚಿತ್ರತಂಡದ ವಿವರಣೆ.

ಯೋಗಿ ಈ ಚಿತ್ರದ ನಾಯಕ. ನಾಯಕಿಯಾಗಿ ಅದಿತಿ ಪ್ರಭುದೇವ ನಟಿಸಿದ್ದಾರೆ. ಜೊತೆಗೆ ಸಾಯಿಕುಮಾರ್, ಅಶೋಕ್, ಸುಂದರ್, ರಮೇಶ್ ಭಟ್, ಶ್ರುತಿ ನಾಯಕ್, ಪ್ರಶಾಂತ್ ಸಿದ್ದಿ ಮುಂತಾದ ನಟರ ದಂಡೇ ಇದೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ ಮತ್ತು ರಾಕೇಶ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ■

